ಕೆರೆಗಳ ಅಭಿವೃದ್ಧಿ

179(592); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ

ಅ) ರಾಜ್ಯದಲ್ಲಿ ಅಂತರ್ಜಲವೃದ್ಧಿಗೆ ಕೆರೆಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ರಾಜ್ಯದಲ್ಲಿರುವ ಎಷ್ಟು ಕೆರೆಗಳಲ್ಲಿ ಹೂಳೆತ್ತುವುದು ಅವಶ್ಯಕವಾಗಿದೆ ;

ಇ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೆರೆಗಳಲ್ಲಿ ಹೂಳೆತ್ತುವ ಕೆಲಸ ಕಾರ್ಯಗಳಾಗಿವೆ;

ಈ) ಈ ವರ್ಷ ಎಷ್ಟು ಕೆರೆಗಳಲ್ಲಿ ಹೂಳೆತ್ತುವ ಉದ್ದೇಶ ಸರ್ಕಾರಕ್ಕಿದೆ;

ಉ) ಈ ಪೈಕಿ ಬಿಜಾಪುರ ಜಿಲ್ಲೆಯ ಎಷ್ಟು ಕೆರೆಗಳು ಸೇರಿವೆ? (ಸಂಪೂರ್ಣ ವಿವರವನ್ನು ನೀಡುವುದು)?

ಶ್ರೀ ಶಿವರಾಜ್ ಎಸ್ ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಕೆರೆಗಳು, ಪಿಕಪ್‌ಗಳು, ಬಾಂಧಾರಗಳು, ಬ್ಯಾರೇಜ್‌ಗಳು ಮತ್ತು ಏತನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದರ ಜೊತೆಗೆ ಅಂತರ್ಜಲ ಅಭಿವೃದ್ಧಿಪಡಿಸಲು ಇಂಗು ಕೆರೆಗಳನ್ನು ನಿರ್ಮಾಣ ಮಾಡುವುದರ ಮೂಲಕ ಪರೋಕ್ಷವಾಗಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಂತರ್ಜಲ ಅಭಿವೃದ್ಧಿಯಾಗುವುದು.

ಅಂತರ್ಜಲ ಅಭಿವೃದ್ಧಿಪಡಿಸಲು ರಾಜ್ಯದ ಅಂತರ್ಜಲ ಅತೀ ಬಳಕೆ, ಕ್ಲಿಷ್ಟಕರ ಪ್ರದೇಶಗಳಲ್ಲಿ ಹೆಚ್ಚು ಮಹತ್ವ ಕೊಟ್ಟು ಜನಜಾಗೃತಿ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ರಾಜ್ಯದ ವಿವಿಧ ತಾಲ್ಲೂಕು ಮಟ್ಟ, ಶಾಲಾ ಕಾಲೇಜು ಮಟ್ಟದಲ್ಲಿ ಜನಜಾಗೃತಿ ಶಿಬಿರಗಳನ್ನು ಏರ್ಪಡಿಸಿ ಅಂತರ್ಜಲ ಅತೀ ಬಳಕೆ ಪ್ರಮಾಣಗಳು, ಮಳೆ ನೀರಿನ

ಸಂಗ್ರಹಣೆ ಮತ್ತು ಮರುಬಳಕೆ ಹಾಗೂ ಅಂತರ್ಜಲ ಸದ್ಬಳಕೆ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಆ) ಸಾಮಾನ್ಯವಾಗಿ ಪ್ರತಿ ವರ್ಷ ಬೀಳುವ ಮಳೆ ನೀರಿನೊಂದಿಗೆ ಹೂಳು ಸಹ ಕೆರೆಯ ಅಂಗಳವನ್ನು ಸೇರುವುದು ನೈಸರ್ಗಿಕ ಕ್ರಿಯೆಯಾಗಿರುವುದರಿಂದ ಎಲ್ಲಾ ಕೆರೆಗಳಲ್ಲೂ ಭಾಗಶಃ ಹೂಳು ತುಂಬಿರುತ್ತದೆ.

ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಯ ಕೆರೆಗಳ ಹೂಳನ್ನು ತೆಗೆಯಲು ವಿವಿಧ ಲೆಕ್ಕ ಶೀರ್ಷಿಕೆಗಳಡಿ ಒದಗಿಸಲಾಗುವ ಅನುದಾನದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಇ) ಕಳೆದ 3 ವರ್ಷಗಳಲ್ಲಿ ವಿವಿಧ ಯೋಜನಾ ಲೆಕ್ಕಶೀರ್ಷಿಕೆಗಳಡಿ ಒಟ್ಟು 1512 ಕೆರೆಗಳ ಭಾಗಶಃ ಹೂಳೆತ್ತುವ ಕೆಲಸಕಾರ್ಯ ನಿರ್ವಹಿಸ ಲಾಗಿದೆ. ಈ ಕಾಮಗಾರಿಗಳಲ್ಲಿ ಅನುದಾನದ ಲಭ್ಯತೆ ಹಾಗೂ ಹೂಳೆತ್ತಲು ಅವಕಾಶ ಕಲ್ಪಿಸಲಾಗಿದೆ.

ಜಲ ಸಂವರ್ಧನೆ ಯೋಜನಾ ಸಂಘವು, ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯಡಿಯಲ್ಲಿ ಎರಡನೇ ಹಂತದಲ್ಲಿ ಸಮುದಾಯದ ಸಹಭಾಗಿತ್ವದಲ್ಲಿ ಪುನಃಶ್ಚೇತನಗೊಳಿಸಲು ಆಯ್ಕೆಮಾಡಲಾದ 1881 ಕೆರೆಗಳ ಪೈಕಿ ಸಮುದಾಯದ ಬೇಡಿಕೆ ಆಧಾರದ ಮೇಲೆ 1706 ಕೆರೆಗಳಲ್ಲಿ ಭಾಗಶಃ ಹೂಳೆತ್ತಲಾಗಿದೆ.

ಈ) ನಿರ್ದಿಷ್ಟವಾದ ಯಾವುದೇ ಹೂಳು ತೆಗೆಯುವ ಯೋಜನೆ ಈ ವರ್ಷದಲ್ಲಿ ಇರುವುದಿಲ್ಲ. ಆದಾಗ್ಯೂ ಈ ವರ್ಷದಲ್ಲಿ 62 ಕೆರೆಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ಭಾಗಶಃ ಹೂಳು ತೆಗೆಸಲು ಯೋಜಿಸಲಾಗಿದೆ.

ಉ) ಈ ಬಗ್ಗೆ ಬಿಜಾಪುರ ಜಿಲ್ಲೆಯ ಕೆರೆಗಳು ಸೇರಿರುವುದಿಲ್ಲ.